# ರಾಜ್ಯದಲ್ಲಿ ಶೀಘ್ರ ಕೃಷಿಕರ ಸಮೀಕ್ಷೆ

**ಬೆಂಗಳೂರು:** ಮೊದಲ ಬಾರಿಗೆ ರಾಜ್ಯದಲ್ಲಿ ಪ್ರತ್ಯೇಕವಾಗಿ ರೈತರಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ ಕಾರ್ಯ ಆರಂಭವಾಗುತ್ತಿದೆ. ಕೆಲ ದಿನಗಳಲ್ಲೇ 'ಆಧಾರ್' ಮಾದರಿಯಲ್ಲಿ ರೈತರಿಗೂ ಒಂದು ಅಧಿಕೃತ ಸಂಖ್ಯೆ ನೀಡಲಾಗುತ್ತದೆ.ಕೃಷಿ ಇಲಾಖೆ 'ಕೆ-ಕಿಸಾನ್' (ಕರ್ನಾಟಕ ಕೃಷಿ ಮಾಹಿತಿ ಸೇವೆಗಳು ಮತ್ತು ನೆಟ್‌ವರ್ಕಿಂಗ್) ಯೋಜನೆಯಡಿ ಈ ಕಾರ್ಯಕ್ರಮ ಕೈಗೆತ್ತಿಕೊಂಡಿದೆ. ಸಿಬ್ಬಂದಿಗೆ ಈಗಾಗಲೇ ತರಬೇತಿಯನ್ನೂ ಪೂರ್ಣಗೊಳಿಸಲಾಗಿದ್ದು ಮೇ ಮೊದಲ ವಾರದಲ್ಲಿ ಮಾಹಿತಿ ಸಂಗ್ರಹಣೆ ಕಾರ್ಯ ಆರಂಭವಾಗುವ ಸಾಧ್ಯತೆ ಇದೆ.ರಾಜ್ಯದಲ್ಲಿ ಇದುವರೆಗೂ ರೈತರ ಸಮೀಕ್ಷೆ ನಡೆದಿರಲಿಲ್ಲ, 78 ಲಕ್ಷ ಕೃಷಿಕರಿದ್ದಾರೆ, 121 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಇದೆ ಎಂಬ ಮಾಹಿತಿಯಷ್ಟೇ ಲಭ್ಯವಿದೆ. ವಿವರ » 5

### ಆಧಾರ್ ಮಾದರಿಯಲ್ಲಿ ರೈತರಿಗೂ ಒಂದು ಸಂಖ್ಯೆ

# ರಾಜ್ಯದಲ್ಲಿ ಶೀಘ್ರ ರೈತರ ಅಂಕಿ-ಅಂಶ ಸಂಗ್ರಹ

■ **ವಿರೂಪಾಕ್ಷಹೊಕ್ರಾಣಿ** ಬೆಂಗಳೂರು

ಮೊದಲ ಬಾರಿಗೆ ರಾಜ್ಯದಲ್ಲಿ ಪ್ರತ್ಯೇಕವಾಗಿ ರೈತರಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ ಕಾರ್ಯ ಆರಂಭವಾಗುತ್ತಿದೆ. ಕೆಲ ದಿನಗಳಲ್ಲೇ 'ಆಧಾರ್' ಮಾದರಿಯಲ್ಲಿ ರೈತರಿಗೂ ಒಂದು ಅಧಿಕೃತ ಸಂಖ್ಯೆ ನೀಡಲಾಗುತ್ತದೆ.

ಕೃಷಿ ಇಲಾಖೆ 'ಕೆ-ಕಿಸಾನ್' (ಕರ್ನಾಟಕ ಕೃಷಿ ಮಾಹಿತಿ ಸೇವೆಗಳು ಮತ್ತು ನೆಟ್‌ವರ್ಕಿಂಗ್) ಯೋಜನೆಯಡಿ ಈ ಕಾರ್ಯಕ್ರಮ ಕೈಗೆತ್ತಿ ಕೊಂಡಿದೆ. ಸಿಬ್ಬಂದಿಗೆ ಈಗಾಗಲೇ ತರಬೇತಿಯನ್ನೂ ಪೂರ್ಣಗೊಳಿಸಲಾಗಿದ್ದು ಮೇ ಮೊದಲ ವಾರದಲ್ಲಿ ಮಾಹಿತಿ ಸಂಗ್ರಹಣೆ ಕಾರ್ಯ ಆರಂಭವಾಗುವ ಸಾಧ್ಯತೆ ಇದೆ.

ರಾಜ್ಯದಲ್ಲಿ ಇದುವರೆಗೂ ರೈತರ ಸಮೀಕ್ಷೆ ನಡೆದಿರಲಿಲ್ಲ. 78 ಲಕ್ಷ ಕೃಷಿಕರಿದ್ದಾರೆ, 121 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಇದೆ ಎಂಬ ಮಾಹಿತಿಯಷ್ಟೇ ಲಭ್ಯವಿದೆ. ಈಗಾಗಲೇ ತಮಿಳುನಾಡಿನಲ್ಲಿ ರೈತರ ಬಗ್ಗೆ ಇಂತಹದ್ದೊಂದು ಸಮೀಕ್ಷೆ ನಡೆದಿದೆ ಎಂಬ ಮಾಹಿತಿ ಇದ್ದರೂ ಅದು ಬೇರೆ ಮಾದರಿಯಲ್ಲಿದೆ. ರೈತರು ಮತ್ತು ಕೃಷಿ ಭೂಮಿ ಬಗ್ಗೆ ಸಂಪೂರ್ಣವಾಗಿ ವಿವರಗಳನ್ನು ಸಂಗ್ರಹಿಸುವುದು ಮತ್ತು ಸರಕಾರದ ಯೋಜನೆಗಳನ್ನು ನೇರವಾಗಿ ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಪಾರದರ್ಶಕತೆ ತರಲು ಇಂತಹ ವಿನೂತನ ಯೋಜನೆ ಕೈಗೆತ್ತಿಕೊಳ್ಳಲಾಗಿದೆ.

**ಹೇಗೆ ಮಾಹಿತಿ ಸಂಗ್ರಹಣೆ ?:** ರೈತರ ಮಾಹಿತಿ ಸಂಗ್ರಹಣೆ ದೃಷ್ಟಿಯಿಂದ ಈಗಾಗಲೇ ಮುಖ್ಯ ತರಬೇತುದಾರರಿಗೆ ತರಬೇತಿ ನೀಡಲಾಗಿದೆ. ಅಲ್ಲದೆ, ರೈತರ ಮಾಹಿತಿ ಸಂಗ್ರಹಿಸಿ ಕೆ-ಕಿಸಾನ್ ಸಾಫ್ಟ್‌ವೇರ್ ಯಾವ ರೀತಿ ಅಳವಡಿಸಬೇಕು, ಯಾವ ಯಾವ ಮಾದರಿಗಳಲ್ಲಿ ಮಾಹಿತಿ ಸಂಗ್ರಹಿಸಬೇಕು ಎಂದು ಸೂಚಿಸಲಾಗಿದೆ. ಕೆ-ಕಿಸಾನ್ ಯೋಜನೆಯಡಿ ಸದ್ಯ ಪ್ರತಿ ಕಸಬಾ ಹೋಬಳಿಗಳು ಅಂದರೆ ತಾಲೂಕಾ ಮಟ್ಟದಲ್ಲಿರುವ ಕೃಷಿ ಕಚೇರಿಗಳನ್ನು ಸಂಪೂರ್ಣವಾಗಿ ಕಂಪ್ಯೂಟರೀಕರಣಗೊಳಿಸಲಾಗಿದೆ. ಮಾಹಿತಿ ಸಂಗ್ರಹಣೆ ನಂತರ ಅದನ್ನು ಇಲ್ಲಿ ಕೆ-ಕಿಸಾನ್ ಸಾಫ್ಟ್‌ವೇರ್‌ಗೆ ಅಳವಡಿಸಲಾಗುತ್ತದೆ.

ಮೊದಲ ಹಂತದಲ್ಲಿ 176 ತಾಲೂಕಿನ ಕಸಬಾ ಹೋಬಳಿ ಕೇಂದ್ರದ ವ್ಯಾಪ್ತಿಯಲ್ಲಿರು ವಂತಹ ಕೃಷಿಕರ ಮಾಹಿತಿ ಸಂಗ್ರಹಣೆ ಕಾರ್ಯ ಮೇ ಮೊದಲ ವಾರದಲ್ಲಿ ಆರಂಭವಾಗುತ್ತದೆ. ಎರಡು ತಿಂಗಳ ಅವಧಿಯಲ್ಲಿ ಮಾಹಿತಿ ಸಂಗ್ರಹಿಸಿ ಸಾಫ್ಟ್‌ವೇರ್‌ಗೆ ಅಳವಡಿಸುವ ಗುರಿ ಹಾಕಿಕೊಳ್ಳಲಾಗಿದೆ. ತದನಂತರ ರಾಜ್ಯದಲ್ಲಿರುವ ಒಟ್ಟು 747 ಹೋಬಳಿಗಳಲ್ಲಿ ಮಾಹಿತಿ ಸಂಗ್ರಹಣೆ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತದೆ. ಮಳೆಗಾಲದಲ್ಲಿ ರೈತರು ಹೆಚ್ಚಾಗಿ ರೈತ ಸಂಪರ್ಕ ಕೇಂದ್ರಗಳತ್ತ ಬರುತ್ತಾರೆ. ಪ್ರತಿ ಕೇಂದ್ರದಲ್ಲಿಯೂ 10-12 ಸಿಬ್ಬಂದಿ ಇದ್ದಾರೆ. ಮಾಹಿತಿ ಸಂಗ್ರಹಣೆಯಾಗಿಯೇ ಕೆಲ ಸಿಬ್ಬಂದಿ ಗಳನ್ನು ಪ್ರತ್ಯೇಕವಾಗಿ ನಿಯೋಜಿಸಲು ಸಾಧ್ಯವೇ? ಎಂಬುದರ ಬಗ್ಗೆಯೂ ಚಿಂತಿಸಲಾಗುತ್ತಿದೆ. ಮಾಹಿತಿ ಸಂಗ್ರಹಿಸಿದ ನಂತರ ಅದನ್ನು ತಾಲೂಕಾ ಕೃಷಿ ಅಧಿಕಾರಿ ಮತ್ತು ಜಿಲ್ಲಾ ಕೃಷಿ ಅಧಿಕಾರಿಗಳು ಸಂಪೂರ್ಣ ನಿಗಾವಹಿಸಿ ಅದನ್ನು ಪರಿಶೀಲಿಸಬೇಕು ಎಂದೂ ಸೂಚಿಸಲಾಗಿದೆ.

**ಏನು ಉಪಯೋಗ?:** ಕೃಷಿಕರ ಬಗ್ಗೆ ಪ್ರಾಥಮಿಕ ಮಾಹಿತಿ ಇಲ್ಲದಿರುವುದರಿಂದ ರೈತಪರ ಯೋಜನೆಗಳು ಸಂಪೂರ್ಣ ಯಶಸ್ವಿಯಾಗುತ್ತಿಲ್ಲ. ಈ ಲೋಪ ನೀಗಲು ಡಾಟಾ ಸಂಗ್ರಹಣೆಗೆ ಉದ್ದೇಶಿಸಲಾಗಿದೆ. ರಾಜ್ಯದಲ್ಲಿ ಅತೀ ಸಣ್ಣ ರೈತರು, ಸಣ್ಣ ರೈತರು, ಮಧ್ಯಮ ರೈತರು ಮತ್ತು ದೊಡ್ಡ ರೈತರು ಎಷ್ಟಿದ್ದಾರೆ? ಅವರ ಜಿಲ್ಲಾವಾರು ಹಂಚಿಕೆ ಹೇಗಿದೆ? ಎಂಬ ಮಾಹಿತಿ ದೊರೆಯು ವುದರಿಂದ ನಿಗದಿತ ಗುರಿಯೊಂದಿಗೆ ಆಯಾ ವರ್ಗದ ರೈತರ ಪರವಾಗಿ ಯೋಜನೆಗಳನ್ನು ರೂಪಿಸಲು ಮತ್ತು ಸೌಲಭ್ಯಗಳನ್ನು ಹಂಚಿಕೆ ಮಾಡಲು ನೆರವಾಗುತ್ತದೆ. ಅಲ್ಲದೆ, ರೈತರ ಸ್ಥಿತಿಗತಿ, ಮಣ್ಣಿನ ಮಾದರಿ ಮತ್ತು ಫಲವತ್ತತೆ, ಕೆಲ ವರ್ಷಗಳಿಂದ ನಿಯಮಿತವಾಗಿ ಬೆಳೆಯುತ್ತಿರುವ ಬೆಳೆ ಯಾವುದು? ಸರಕಾರದ ಸಹಾಯಧನದ ಸೌಲಭ್ಯಗಳನ್ನು ಇದುವರೆಗೂ ಪಡೆದಿದ್ದಾರಾ? ಒಂದು ವೇಳೆ ಪಡೆಯುತ್ತಿದ್ದರೆ ಯಾವ ತರಹದ ಸೌಲಭ್ಯಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ? ಎಂಬ ಮಾಹಿತಿ ಲಭ್ಯವಾಗುತ್ತದೆ.

**ರೈತರಿಗೂ ನಂಬರ್:** ಸಮೀಕ್ಷೆ ಪೂರ್ಣಗೊಂಡ ನಂತರ ಆಧಾರ್ ಮಾದರಿಯಲ್ಲಿ ರೈತರಿಗೆ ಕೃಷಿ ಇಲಾಖೆಯಿಂದ ಅಧಿಕೃತ ಸಂಖ್ಯೆ ನೀಡಲಾಗುತ್ತದೆ. ಅದನ್ನು ಕಾರ್ಡ್ ರೂಪದಲ್ಲಿ ನೀಡಬೇಕು ಎಂದೂ ಉದ್ದೇಶಿಸಲಾಗಿದೆ. ಸರಕಾರ ರೈತರಿಗೆ ಸಹಾಯಧನದಲ್ಲಿ ಬಿತ್ತನೆ ಬೀಜ, ರಸಗೊಬ್ಬರ, ಕೃಷಿ ಉಪಕರಣಗಳು ಮುಂತಾದ ಸೌಲಭ್ಯಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕವೇ ತಲುಪಿಸಲಾಗುತ್ತದೆ. ಕೆ-ಕಿಸಾನ್ ಯೋಜನೆಯಡಿ ಎಲ್ಲ ರೈತ ಸಂಪರ್ಕ ಕೇಂದ್ರಗಳನ್ನೂ ಕಂಪ್ಯೂಟರೀಕರಣಗೊಳಿಸುವ ಯೋಜನೆ ಇದೆ. ರೈತರು ತಮಗೆ ನೀಡಿರುವ ಅಧಿಕೃತ ಸಂಖ್ಯೆ ನೀಡಿ ತಮಗೆ ಸರಕಾರ ಸಿದ್ಧಪಡಿಸಿರುವ ಯೋಜನೆಗಳ ವಿವರ ಪಡೆದುಕೊಳ್ಳಬಹುದು. ಇದರಿಂದ ಕೆಲ ರೈತರು ಸೌಲಭ್ಯಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನೂ ತಪ್ಪಿಸಲು ಸಾಧ್ಯವಾ ಗುತ್ತದೆ ಎಂಬುದು ಕೃಷಿ ಇಲಾಖೆ ಅಧಿಕಾರಿಗಳ ಹೇಳಿಕೆ.



**ಪ್ರಮುಖಾಂಶಗಳು**

- ರೈತರ ಮಾಹಿತಿ ಸಂಗ್ರಹಣೆ ಶೀಘ್ರದಲ್ಲೇ ಆರಂಭ
- 'ಆಧಾರ್' ಮಾದರಿಯಲ್ಲಿ ಕೃಷಿ ಇಲಾಖೆಯಿಂದ ರೈತರಿಗೆ ಅಧಿಕೃತ ಸಂಖ್ಯೆ
- ಮೊದಲ ಹಂತದಲ್ಲಿ 176 ಕಸಬಾ ಹೋಬಳಿಗಳಲ್ಲಿ ಸಮೀಕ್ಷೆ ಮೇ ಮೊದಲ ವಾರದಲ್ಲಿ ಆರಂಭ
- ಕೆ-ಕಿಸಾನ್ ಯೋಜನೆಯಡಿ ಈ ಕಾರ್ಯ
- ಕಸಬಾ ಹೋಬಳಿ ಕಂಪ್ಯೂಟರೀಕರಣ, ಪ್ರತಿ ರೈತ ಸಂಪರ್ಕ ಕೇಂದ್ರಗಳಲ್ಲೂ ಕಂಪ್ಯೂಟರ್ ಅಳವಡಿಕೆ

**ಕೆ-ಕಿಸಾನ್ ಯೋಜನೆಯಡಿ ರಾಜ್ಯದ ರೈತರು ಮತ್ತು ಕೃಷಿ ಭೂಮಿ ಬಗ್ಗೆ ಮಾಹಿತಿ ಸಂಗ್ರಹಿಸಿ ಅವರಿಗೆ ಅಧಿಕೃತವಾಗಿ ಸಂಖ್ಯೆ ನೀಡುವಂತಹ ಯೋಜನೆ ರೂಪಿಸಲಾಗಿದೆ. ಈಗಾಗಲೇ ಮಾಹಿತಿ ಸಂಗ್ರಹಣೆದಾರರಿಗೆ ತರಬೇತಿ ನೀಡಲಾಗಿದೆ. ಆರಂಭದಲ್ಲಿ ಪ್ರತಿ ಕಸಬಾ ಹೋಬಳಿ ವ್ಯಾಪ್ತಿಯ ರೈತರ ಮಾಹಿತಿ ಸಂಗ್ರಹಿಸಲಾಗುತ್ತದೆ. ಎರಡು ತಿಂಗಳಲ್ಲಿ ಪೂರ್ಣಗೊಂಡ ನಂತರ ಪ್ರತಿ ಹೋಬಳಿ ಮಟ್ಟದಲ್ಲಿ ಮಾಹಿತಿ ಸಂಗ್ರಹಣೆಗೆ ಚಾಲನೆ ನೀಡಲಾಗುತ್ತದೆ.**

**-ಸುಬೋಧ್ ಯಾದವ್** , ಕೃಷಿ ಇಲಾಖೆ ಆಯುಕ್ತ